**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**
**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

**ಐ.ಎಫ್.ಟಿ. ಸಂಖ್ಯೆ/ಶಿದಾಚಿಸಹಾಒ/ಮಾರುಕಟ್ಟೆ/ಕ್ಷೀ.ಭಾ./ಟೆಂಡರ್/3589/2024–25** **ದಿನಾಂಕ: 05.08.2024**

**–: *ಕ್ಷೀರಭಾಗ್ಯ ಯೋಜನೆಯಡಿ ಹಾಲಿನ ಪುಡಿ ಸಾಗಾಣಿಕೆ ಮಾಡಲು ಎರಡು ವರ್ಷ ಅವಧಿಗೆ ಗುತ್ತಿಗೆ ಆಧಾರದಲ್ಲಿ* ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ :–**

**"ಕ್ಷೀರಭಾಗ್ಯ"** ಯೋಜನೆಯಡಿ **ಮದರ್ ಡೈರಿ, ಬೆಂಗಳೂರು ಪ್ಯಾಕಿಂಗ್ ಕೇಂದ್ರದಿಂದ** ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ **ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಲು** ಎರಡು ವರ್ಷದ ಅವಧಿಗೆ **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in/** ಮೂಲಕ (ಟೆಕ್ನಿಕಲ್/ಕಮರ್ಷಿಯಲ್) ಟೆಂಡರ್ ಕರೆಯಲಾಗಿದ್ದು, ಆಸಕ್ತರು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

| | | |
|---|---|---|
| **1** | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 07.08.2024 ರಿಂದ** |
| **2** | **ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ** | **ದಿನಾಂಕ: 26.08.2024 ರಂದು ಸಂಜೆ: 17.30 ಗಂಟೆಯವರೆಗೆ** |
| **3** | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | **ದಿನಾಂಕ: 28.08.2024 ರಂದು ಬೆಳಿಗ್ಗೆ: 11.30 ಗಂಟೆಗೆ** |
| **4** | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | **ದಿನಾಂಕ: 30.08.2024 ರಂದು ಬೆಳಿಗ್ಗೆ: 11.30 ಗಂಟೆಗೆ** |

## I. ಹಾಲಿನ ಪುಡಿ ಸಾಗಾಣಿಕೆ ವಿವರಗಳು (ಪ್ಯಾಕಿಂಗ್ ಕೇಂದ್ರದಿಂದ ತಾಲ್ಲೂಕು ಕೇಂದ್ರಗಳಿಗೆ) :–

**ಮದರ್ ಡೈರಿ, ಬೆಂಗಳೂರು ಪ್ಯಾಕಿಂಗ್** ಕೇಂದ್ರದಿಂದ ಈ ಕೆಳಗೆ ನಮೂದಿಸಿರುವ ಚಿತ್ರದುರ್ಗ ಜಿಲ್ಲೆ ವ್ಯಾಪ್ತಿಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ / ಸಿ.ಡಿ.ಪಿ.ಓ ಕಚೇರಿ ಗೋದಾಮುಗಳಿಗೆ ಹಾಲಿನ ಪುಡಿ ಸರಬರಾಜು ಮಾಡಬೇಕಾದ ವಿವರಗಳು :–

| ಕ್ರ.ಸಂ | ಪ್ಯಾಕಿಂಗ್ ಕೇಂದ್ರಗಳು ಇರುವ ಸ್ಥಳ | ಹಾಲಿನ ಪುಡಿ ಸಾಗಾಣಿಕೆ ಮಾಡಬೇಕಾದ ತಾಲ್ಲೂಕುಗಳ ಹೆಸರು | ಇ.ಎಂ.ಡಿ. ರೂ. | ಭದ್ರತಾ ಠೇವಣಿ ರೂ. | ಮಾಹೆಯಾನ ಅಂದಾಜು ಹಾಲಿನ ಪುಡಿಯ ಸಾಗಾಣಿಕೆ ಪರಿಮಾಣ (ಕೆ.ಜಿ.ಗಳಲ್ಲಿ) |
|---|---|---|---|---|---|
| 1 | **ಮದರ್ ಡೈರಿ, ಯಲಹಂಕ, ಬೆಂಗಳೂರು.** | ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು, ಹೊಳಲ್ಕೆರೆ, ಹೊಸದುರ್ಗ ತಾಲ್ಲೂಕು ಕೇಂದ್ರಗಳಿಗೆ | 1,50,000/– | 3,00,000/– | 1,10,000 ಕೆ.ಜಿ. |

**"ಕ್ಷೀರ ಭಾಗ್ಯ ಯೋಜನೆಯಡಿ ಪ್ಯಾಕಿಂಗ್ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವ ಷರತ್ತು ಮತ್ತು ನಿಬಂಧನೆಗಳು" :–**

1. ಯಶಸ್ವಿ ಟೆಂಡರ್‌ದಾರರು ಕಹಾಮ ನಿಗದಿಪಡಿಸಿದ **ಮದರ್ ಡೈರಿ ಪ್ಯಾಕಿಂಗ್** ಕೇಂದ್ರಗಳಿಂದ ಕನೆಭರಿತ ಹಾಲಿನ ಪುಡಿಯನ್ನು ಎತ್ತುವಳಿ ಮಾಡಿ ಸಂಬಂದಪಟ್ಟ ತಾಲ್ಲೂಕುಗಳಲ್ಲಿನ ಸರ್ಕಾರಿ ಗೋದಾಮುಗಳಿಗೆ / ಖಾಸಗಿ ಗುತ್ತಿಗೆ ಗೋದಾಮುಗಳಿಗೆ / ಎಲ್ಲಾ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಗೋದಾಮುಗಳಿಗೆ ಸಾಗಾಣಿಕೆ ಮಾಡುವುದು.

**ಮುಂದುವರೆದಿದೆ.,**

2. **ಅರ್ಜಿದಾರರು ಅರ್ಜಿ ಸಲ್ಲಿಸುವಾಗ ಟೆಕ್ನಿಕಲ್ ಟೆಂಡರ್ ಅರ್ಜಿಯನ್ನು ಸಹಿಯೊಂದಿಗೆ ತಪ್ಪದೇ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿhttps://kppp.karnataka.gov.in ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ.**
3. ಹಾಲಿನ ಪುಡಿ ಪ್ರಮಾಣದಲ್ಲಿ ಸಿ.ಡಿ.ಪಿ.ಓ ಕಚೇರಿ / ಶಾಲೆಗಳ ಬೇಡಿಕೆಗಳಿಗನುಸಾರ ಕಾಲ ಕಾಲಕ್ಕೆ ಬದಲಾವಣೆಗೆ ಒಳಪಟ್ಟಿರುತ್ತದೆ.
4. ಅರ್ಜಿದಾರರು ಪ್ಯಾಕಿಂಗ್ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸರಬರಾಜು ಮಾಡಲು **ಪ್ರತಿ ಟನ್‌ಗೆ ಸಾಗಾಣಿಕೆ ದರವನ್ನು** ನಮೂದಿಸತಕ್ಕದ್ದು. ಕಮರ್ಷಿಯಲ್ ಟೆಂಡರ್‌ನ್ನು ಗಣನೆಗೆ ತೆಗೆದುಕೊಳ್ಳುವಾಗ, ಪ್ಯಾಕಿಂಗ್ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳಿಗೆ **ಪ್ರತಿ ಟನ್‌ಗೆ** ನಮೂದಿಸಿದ ದರಗಳನ್ನು ಕ್ರೋಢೀಕರಿಸಿ L1 ಟೆಂಡರ್‌ದಾರರೆಂದು ಪರಿಗಣಿಸಲಾಗುವುದು.
5. ಒಂದೇ ಲೋಡ್‌ನಲ್ಲಿ 2 ಅಥವಾ ಅದಕ್ಕಿಂತ ಹೆಚ್ಚಿನ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಬೇಕಾದಲ್ಲಿ ಹೆಚ್ಚಿನ ಅಂತರವಿರುವ ಕೇಂದ್ರದ ಬಾಡಿಗೆಯನ್ನು ಸಾಗಾಣಿಕೆ ಬಿಲ್ ಪಾವತಿಗೆ ಪರಿಗಣಿಸಲಾಗುವುದು.
6. ಟೆಂಡರ್‌ನಲ್ಲಿ ನಿಗದಿಯಾಗುವ ಸಾಗಾಣಿಕೆ ದರವು ಲೋಡಿಂಗ್, ಅನ್ ಲೋಡಿಂಗ್ ಮತ್ತು ಟೋಲ್ ವೆಚ್ಚವು ಸೇರಿರುತ್ತದೆ.
7. ಟೆಂಡರ್ ವಿಧಿವಿಧಾನಗಳನ್ನು ಪೂರೈಸಿ, ಗುತ್ತಿಗೆ ಆದೇಶ ಪಡೆಯಲು ವಿಫಲವಾದಲ್ಲಿ ಇ.ಎಂ.ಡಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
8. ಕೆನೆಭರಿತ ಹಾಲಿನ ಪುಡಿಯನ್ನು 500 ಗ್ರಾಂ ಪ್ಯಾಕ್ ಹಾಗೂ 1 ಕೆ.ಜಿ ಪ್ಯಾಕ್‌ನ 25/20 ಕೆ.ಜಿ ಚೀಲಗಳಲ್ಲಿ ಎತ್ತುವಳಿ ಮಾಡಬೇಕಾಗಿರುತ್ತದೆ.
9. ಯಶಸ್ವಿ ಟೆಂಡರ್‌ದಾರರು ಹಾಲಿನ ಪುಡಿಯನ್ನು ಹವಾಮಾನ ಮತ್ತು ಇತರೆ ವೈಪರೀತ್ಯದಿಂದ ರಕ್ಷಿಸುವಂತೆ ಸಾಗಾಣಿಕೆಗೆ ಕವಚವುಳ್ಳ ವಾಹನದಲ್ಲಿ ಹಾಗೂ ಸುರಕ್ಷಿತವಾಗಿ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದು.
10. ಕೆಲವೊಮ್ಮೆ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳವರ ಕಚೇರಿಯಿಂದ / ಜಿಲ್ಲಾ ಪಂಚಾಯತ್ ಅಕ್ಷರ ದಾಸೋಹ ಇಲಾಖೆಯವರಿಂದ ಬರುವ ಬೇಡಿಕೆ ಪ್ರಕಾರ 2 ತಿಂಗಳ ಬೇಡಿಕೆ ಕೆನೆಭರಿತ ಹಾಲಿನ ಪುಡಿಯನ್ನು ಒಂದೇ ತಿಂಗಳಲ್ಲಿ ಸಂಬಂಧಪಟ್ಟ ತಾಲ್ಲೂಕು ಕೇಂದ್ರಗಳಿಗೆ ಸಾಗಾಣಿಕೆ ಮಾಡಬೇಕಾಗಿರುವುದರಿಂದ ಎತ್ತುವಳಿ ಪ್ರಮಾಣದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ.
11. ಹಾಲಿನ ಪುಡಿ ಪ್ಯಾಕಿಂಗ್ ಕೇಂದ್ರಗಳಿಂದ ನಿಗದಿತ ದಿನಾಂಕದಂದು ಹಾಲಿನ ಪುಡಿ ಲೋಡ್ ಸಿಗದೇ ಇರುವ ಸಂದರ್ಭಗಳಲ್ಲಿ ಖಾಲಿ ವಾಹನ ಲೋಡಿಂಗ್ ಆಗಬೇಕಾಗಿರುವ ಸ್ಥಳದಲ್ಲೇ ಕಾಯಬೇಕಾಗಿದ್ದು, ಇದಕ್ಕೆ ಹೆಚ್ಚುವರಿ ಮೊತ್ತ ಪಾವತಿಸಲು ಅವಕಾಶವಿರುವುದಿಲ್ಲ.
12. ಒಕ್ಕೂಟದ ಆಯಾ ಜಿಲ್ಲಾ ಹಾಗೂ ತಾಲ್ಲೂಕು ನೋಡಲ್ ಅಧಿಕಾರಿಗಳು ಕಾಲಕಾಲಕ್ಕೆ ಸೂಚಿಸುವ ಸಮಯಕ್ಕೆ ವಾಹನವನ್ನು ಒದಗಿಸುವುದು ಹಾಗೂ ಸೂಚಿಸುವ ಸ್ಥಳಕ್ಕೆ / ತಾಲ್ಲೂಕುಗಳಿಗೆ ಸಕಾಲಕ್ಕೆ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದು ವಾಹನ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಇಲ್ಲವಾದಲ್ಲಿ ಸೂಕ್ತ ದಂಡ ವಿಧಿಸಲಾಗುವುದು.
13. ಹಾಲಿನ ಪುಡಿಯನ್ನು ಪ್ಯಾಕಿಂಗ್ ಕೇಂದ್ರಗಳಿಂದ ಪಡೆದು ಸುರಕ್ಷಿತವಾಗಿ ಒಕ್ಕೂಟದಿಂದ ಸೂಚಿಸುವ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಿಗೆ ಸರಬರಾಜು ಮಾಡುವುದು. ಈ ಸಂಬಂಧ ಡ್ಯಾಮೇಜ್ ಅಥವಾ ಇನ್ನಾವುದೇ ದೂರುಗಳು ಬಂದಲ್ಲಿ ಅದಕ್ಕೆ ಸಾಗಾಣಿಕೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ ಹಾಗೂ ಸದರಿ ನಷ್ಟದ ಮೊತ್ತವನ್ನು ಗುತ್ತಿಗೆದಾರರ ಸಾಗಾಣಿಕೆ ಬಿಲ್ಲಿನಲ್ಲಿ ಕಟಾಯಿಸಲಾಗುವುದು.
14. ಕೆನೆಭರಿತ ಹಾಲಿನ ಪುಡಿಯನ್ನು ಪ್ಯಾಕಿಂಗ್ ಕೇಂದ್ರಗಳಿಂದ ಸೂಚಿಸುವ ಜಿಲ್ಲಾ/ತಾಲ್ಲೂಕು ಗೋದಾಮುಗಳಿಗೆ / ಸಿ.ಡಿ.ಪಿ.ಓ ಕಚೇರಿ ಗೋದಾಮುಗಳಿಗೆ / ಖಾಸಗಿ ಗುತ್ತಿಗೆದಾರರ ಗೋದಾಮುಗಳಿಗೆ ತಲುಪಿಸಿ ಇಲಾಖೆಯ ಡೆಸಿಗ್ನೇಟೆಡ್ ಅಧಿಕಾರಿಗಳಿಂದ / ಗುತ್ತಿಗೆದಾರರಿಂದ ತಪ್ಪದೆ ಸಹಿ ಹಾಗೂ ಮೊಹರು ಹೊಂದಿರುವ ಸ್ವೀಕೃತಿಯನ್ನು ಪಡೆದು ಅದನ್ನು ಒಕ್ಕೂಟಕ್ಕೆ ಸಲ್ಲಿಸಬೇಕಾಗಿರುತ್ತದೆ.
15. ಹಾಲಿನ ಪುಡಿ ಸಾಗಾಣಿಕೆ ಮಾಡುವ ಸಮಯದಲ್ಲಿ ವಾಹನದ ಜೊತೆಗೆ ಅಗತ್ಯ ದಾಖಲೆ / ಮಾಹಿತಿಯನ್ನು ಕಳುಹಿಸುವಂತೆ ಕ್ರಮವಿಡುವುದು ತಪ್ಪಿದಲ್ಲಿ ಇದರಿಂದಾಗುವ ತೊಂದರೆಗಳಿಗೆ ಸಾಗಾಣಿಕೆ ಗುತ್ತಿಗೆದಾರರೆ ಜವಾಬ್ದಾರರಾಗಿರುತ್ತಾರೆ.
16. ಡೀಸೆಲ್ ದರವು ಹೆಚ್ಚು ಅಥವಾ ಕಡಿಮೆಯಾದಲ್ಲಿ **ಸಾಗಾಣಿಕೆ ದರವನ್ನು** ಪರಿಷ್ಕರಿಸಲಾಗುವುದು.

ಮುಂದುವರೆದಿದೆ.,

17. ಮೇಲಿನ ನಿಬಂಧನೆಗಳಲ್ಲದೇ ಕಾಲ ಕಾಲಕ್ಕೆ ಒಕ್ಕೂಟವು ಹೊರಡಿಸುವ ನಿಯಮಗಳನ್ನು ತಮಗೂ ಅಳವಡಿಸಲಾಗುವುದೆಂದು ತಿಳಿಯತಕ್ಕದ್ದು. ಅನಿವಾರ್ಯ ಸಂದರ್ಭಗಳಲ್ಲಿ ಗುತ್ತಿಗೆ ಒಪ್ಪಂದವನ್ನು ರದ್ದುಗೊಳಿಸುವ ಅಧಿಕಾರವನ್ನು ಒಕ್ಕೂಟವು ಹೊಂದಿರುತ್ತದೆ.
18. ನಿಗದಿತ ಅವಧಿಯಲ್ಲಿ ಜಿಲ್ಲಾ/ತಾಲ್ಲೂಕು ಗೋದಾಮುಗಳಿಗೆ/ಸಿ.ಡಿ.ಪಿ.ಓ ಕಚೇರಿ ಗೋದಾಮುಗಳಿಗೆ /ಖಾಸಗಿ ಗುತ್ತಿಗೆದಾರರ ಗೋದಾಮುಗಳಿಗೆ ಹಾಲಿನ ಪುಡಿ ಸರಬರಾಜು ಆಗದೆ ವಾಹನ ಗುತ್ತಿಗೆದಾರರಿಂದ / ವಾಹನಗಳ ತೊಂದರೆಯಿಂದ ವಿಳಂಬವಾದಲ್ಲಿ ಒಕ್ಕೂಟದ ವತಿಯಿಂದ ಸೂಕ್ತ ದಂಡ ವಿಧಿಸಲಾಗುವುದು ಹಾಗೂ ದಂಡದ ಮೊತ್ತವನ್ನು ಗುತ್ತಿಗೆದಾರರ ಸಾಗಾಣಿಕೆ ಬಿಲ್ಲಿನಲ್ಲಿ ಕಟಾಯಿಸಿಕೊಳ್ಳಲಾಗುವುದು.
19. ಹಾಲಿನ ಪುಡಿ ಸಾಗಾಣಿಕೆ ಗುತ್ತಿಗೆಗೆ ಸಂಬಂಧಿಸಿದಂತೆ ಯಾವುದೇ ದಂಡ/ಕಟಾವಣೆಗಳನ್ನು ಗುತ್ತಿಗೆದಾರರ ಸಾಗಾಣಿಕೆ ಬಿಲ್ ಅಥವಾ ಸದರಿಯವರು ಒಕ್ಕೂಟದಲ್ಲಿ ತೊಡಗಿಸಿರುವ ಭದ್ರತಾ ಠೇವಣಿಯಿಂದ ಕಟಾಯಿಸಿಕೊಳ್ಳಲಾಗುವುದು.
20. ಪ್ರತಿ ತಿಂಗಳು 3ನೇ ತಾರೀಖಿನೊಳಗೆ ಗುತ್ತಿಗೆದಾರರು ಸಾಗಾಣಿಕೆ ವೆಚ್ಚದ ಬಿಲ್ಲನ್ನು ಒಕ್ಕೂಟಕ್ಕೆ ಸಲ್ಲಿಸುವುದು ಹಾಗೂ ಸಾಗಾಣಿಕೆ ಬಿಲ್ಲಿನಲ್ಲಿ ಪಾನ್ ಸಂಖ್ಯೆ ಮತ್ತು ಬ್ಯಾಂಕ್ ಬ್ರಾಂಚ್‌ನ ಹೆಸರು, ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ ಕೋಡ್‌ನ್ನು ನಮೂದಿಸತಕ್ಕದು.
21. ಹಾಲಿನ ಪುಡಿ ಸರಬರಾಜು ವೇಳೆಯಲ್ಲಿ ಹಾಲಿನ ಪುಡಿ ಪ್ಯಾಕೇಟ್ / ಚೀಲಗಳಲ್ಲಿ ಯಾವುದೇ ಷಾರ್ಟೇಜ್ / ಡ್ಯಾಮೇಜು ಆದಲ್ಲಿ ಅದಕ್ಕೆ ಸಾಗಾಣಿಕೆ ಗುತ್ತಿಗೆದಾರರು ಜವಾಬ್ದಾರರಾಗಿರುತ್ತಾರೆ ಹಾಗೂ ಅದರ ಮೊತ್ತವನ್ನು ಗುತ್ತಿಗೆದಾರರ ಬಿಲ್ಲಿನಲ್ಲಿ ಕಟಾಯಿಸಿಕೊಳ್ಳಲಾಗುವುದು.
22. ಗುತ್ತಿಗೆ ಒಪ್ಪಂದವು 2 ವರ್ಷದ ಅವಧಿಯವರೆಗೆ ಇದ್ದು ಸೇವೆ ತೃಪ್ತಿಕರವಾಗಿದ್ದಲ್ಲಿ ಒಪ್ಪಂದದ ಅವಧಿ ಮುಕ್ತಾಯಗೊಂಡ ನಂತರ ಒಕ್ಕೂಟದ ವಿವೇಚನೆ ಮೇರೆಗೆ ಪ್ರಸ್ತುತ ಚಾಲದತಿಯಲ್ಲಿರುವ ಒಪ್ಪಂದದ ಅವಧಿಯನ್ನು 3 ತಿಂಗಳು ವಿಸ್ತರಿಸುವ ಅಧಿಕಾರವು ಒಕ್ಕೂಟಕ್ಕಿರುತ್ತದೆ ಹಾಗೂ ಪ್ರಕೃತಿ ವಿಕೋಪ, ತುರ್ತು ಸಂದರ್ಭ ಮತ್ತು ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಒಕ್ಕೂಟವು ತನ್ನ ವಿವೇಚನೆ ಮೇರೆಗೆ ಮತ್ತೆ 3 ತಿಂಗಳು ಗುತ್ತಿಗೆ ಒಪ್ಪಂದವನ್ನು ಮುಂದುವರೆಸುವ ಅಧಿಕಾರವನ್ನು ಹೊಂದಿರುತ್ತದೆ.
23. ಯಶಸ್ವಿ ಗುತ್ತಿಗೆದಾರರು ಗುತ್ತಿಗೆ ಪಡೆದ ನಂತರ **ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯಡಿ (FSSAI)** ಪರವಾನಗಿಯನ್ನು ಪಡೆದು ಕಚೇರಿಗೆ ಸಲ್ಲಿಸುವುದು.
24. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ (ಚಾಲಕರು/ಕಂಡಕ್ಟರ್) ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.
25. **"ಕ್ಷೀರಭಾಗ್ಯ"** ಯೋಜನೆಯು ಕರ್ನಾಟಕ ಸರ್ಕಾರದ ಯೋಜನೆಯಾಗಿದ್ದು, ಒಕ್ಕೂಟದ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸರ್ಕಾರವು ಯಾವುದೇ ಹಂತದಲ್ಲಿ ಯೋಜನೆಯನ್ನು ನಿಲ್ಲಿಸಿದ್ದಲ್ಲಿ ಅಥವಾ ಯಾವುದೇ ಮಾರ್ಪಾಡು ಮಾಡಿದ್ದಲ್ಲಿ ಅದಕ್ಕೆ ಅನುಗುಣವಾಗಿ ಕ್ರಮವಿಡಲಾಗುವುದು

**"ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾದುದು."**

ಹೆಚ್ಚಿನ ಮಾಹಿತಿಯನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ/ ಮಾರುಕಟ್ಟೆ ವಿಭಾಗದಿಂದ ಪಡೆಯಬಹುದು. **ದೂರವಾಣಿ : (08182) 246344**. ಮತ್ತು ಒಕ್ಕೂಟದ ವೆಬ್‌ಸೈಟ್ **www.shimul.coop** ಸಂಪರ್ಕಿಸಬಹುದು.

**ಸಹಿ/–**

ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ
ಸಹಕಾರ ಹಾಲು ಒಕ್ಕೂಟ, ನಿ.,

ದಿನಾಂಕ : 05.08.2024
ಸ್ಥಳ : ಶಿವಮೊಗ್ಗ ಡೈ